## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಯಾದಗಿರಿ

## ಸಿ.ಸಿ. ನಂ. 263 / 2021

ಸಿಡಬ್ಲ್ಯೂ- 1
ಪಿಡಬ್ಲ್ಯೂ- 1

ದಿನಾಂಕಃ **11.06.2026.**

ಸಾಕ್ಷಿಗೆ ಸತ್ಯ ಪ್ರತಿಜ್ಞೆ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರುಃ | - | ಬಸಲಿಂಗಮ್ಮ |
| ಗಂಡನ ಹೆಸರುಃ | - | ಯೇಸುಮಿತ್ರ |
| ವಯಸ್ಸುಃ | - | **56** ವರ್ಷ |
| ಉದ್ಯೋಗಃ | - | ಕೂಲಿ ಕೆಲಸ. |
| ವಾಸಸ್ಥಳಃ | - | ಬಾಚವಾರ ಗ್ರಾಮ. |

ಮುಖ್ಯ ವಿಚಾರಣೆಃ ಸ.ಸ.ಅ. ರವರಿಂದಃ

ಚಾಸಾ-4 ನನ್ನ ಗಂಡನಾಗಬೇಕು. ಚಾಸಾ-5 ರಿಂದ 7 ರವರು ನನ್ನ ಮಕ್ಕಳಾಗಬೇಕು. ಆರೋಪಿತರ ಪರಿಚಯ ನನಗೆ ಇರುತ್ತದೆ. ನನ್ನ ಹಾಗೂ ಆರೋಪಿತರ ನಡುವೆ ತಂಟೆ ಆಗಿರುವುದಿಲ್ಲ. ಈಗ ನಾನು ಹಾಗೂ ಆರೋಪಿತರು ರಾಜೀ ಮಾಡಿಕೊಂಡಿರುತ್ತೇವೆ. ನನ್ನ ಹಾಗೂ ಆರೋಪಿತರ ನಡುವೆ ಬಾಯಿ ಮಾತಿನ ಜಗಳ ಆಗಿತ್ತು. ನಾನು ಸಿಟ್ಟಿನಲ್ಲಿ ಆರೋಪಿತರ ವಿರುದ್ಧ ದೂರನ್ನು ಕೊಟ್ಟಿದೆ ಸಾಕ್ಷಿಯು ತಾನು ನೀಡಿದ ದೂರಿನ ಮೇಲೆ ಇರುವ ಹೆಬ್ಬೆಟ್ಟಿನ ಗುರುತನ್ನುನೋಡಿ ಗುರುತಿಸಿರುತ್ತಾರೆ ಆದ್ದರಿಂದ ದೂರನ್ನು ನಿಪಿ 1 ಎಂದು ಗುರುತಿಸಲಾಯಿತು. ನಿಪಿ 1 ರಲ್ಲಿ ಬರೆದಿರುವ ವಿಷಯಗಳು ನನಗೆ ಗೊತ್ತಿರುವುದಿಲ್ಲ. ನಾನು ಗುನ್ನಾ ಸ್ಥಳವನ್ನು ತೋರಿಸಿರುವುದಿಲ್ಲ ಹಾಗೂ ಪೋಲೀಸರು ನನ್ನ ಸಮಕ್ಷಮ ಪಂಚನಾಮೆಯನ್ನು ಮಾಡಿರುವುದಿಲ್ಲ. ಸಾಕ್ಷಿಯು ತಾನು ಇರುವ ಎರಡು ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ನಿಪಿ 2 ಮತ್ತು 3 ಎಂದು ಗುರುತಿಸಲಾಯಿತು. ನಿಪಿ 2 ಮತ್ತು 3 ನ್ನು ಯಾವ ಕಾರಣಕ್ಕಾಗಿ ಪೊಲೀಸರು ತೆಗೆದಿದ್ದರು ಎಂದು ನನಗೆ ಗೊತ್ತಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯು ಪ್ರತಿಕೂಲಕರ ಸಾಕ್ಷ್ಯವನ್ನು ನುಡಿದ ಕಾರಣ ಸ.ಸ.ಅಭಿಯೋಜಕರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. )

ಪಾಟೀ ಸವಾಲುಃ ಸ.ಸ.ಅ ರವರಿಂದಃ

ದಿನಾಂಕಃ 23.03.2021 ರಂದು ದೇವರ ಕಾರ್ಯಕ್ರಮ ಮಾಡಿದರಿಂದ ನನಗೆ ಊಟಕ್ಕೆ ಕರೆಯಾದೇ ಇರುವ ವಿಷಯಕ್ಕೆ ದಿನಾಂಕಃ 24.03.2021 ರಂದು ಬೆಳಗ್ಗೆ 9-00 ಕ್ಕೆ

ಆರೋಪಿತರೆಲ್ಲರೂ ಕೂಡಿ ನನಗೆ ಹೊಡೆಬಡೆ ಮಾಡಿದರು ಎಂದರೆ ಸರಿಯಲ್ಲ. 1 ನೇ ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿದ್ದನ್ನು ಎಂದರೆ ಸರಿಯಲ್ಲ. ಅದೇ ರೀತಿ ಆರೋಪಿತರು ನನಗೆ ಕೈಯಿಂದ ಮತ್ತು ಕಟ್ಟಿಗೆಯಿಂದ ಹೊಡೆಬಡೆ ಮಾಡಿದ್ದರು ಎಂದರೆ ಸರಿಯಲ್ಲ. ಉಳಿದ ಆರೋಪಿತರೆಲ್ಲರೂ ನನ್ನ ಸೀರೆ ಹಿಡಿದು ಎಳೆದಾಡಿ, ಹೊಡೆಬಡೆ ಮಾಡಿ ಸಾರ್ವಜನಿಕ ಸ್ಥಳದಲ್ಲಿ ಅಪಮಾನ ಮಾಡಿದರು ಎಂದರೆ ಸರಿಯಲ್ಲ. ಅದೇ ರೀತಿ ಅವರು ನನಗೆ ಜೀವ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ. ಮರುದಿವಾಸ  ಬೆಳಗ್ಗೆ 9 ಗಂಟೆಯಿಂದ 10 ಗಂಟೆಯ ವರೇಗೆ ಪೊಲೀಸರು ಗುನ್ನಾ ಸ್ಥಳಕ್ಕೆ ಬಂದು ಪಂಚನಾಮೆಯನ್ನು ಮಾಡಿ ಒಂದು ಕಟ್ಟಿಗೆಯನ್ನು ಜಪ್ತಿಪಡಿಸಿಕೊಂಡು ನಿಪಿ 2 ಮತ್ತು 3 ನ್ನು ತೆಗೆದಿದ್ದರು ಎಂದರೆ ಸರಿಯಲ್ಲ. ಈಗ ನಾನು ಆರೋಪಿತರೊಂದಿಗೆ ರಾಜೀ ಮಾಡಿಕೊಂಡು ನಿಪಿ 1 ರಂತೆ ಘಟನೆ ಆಗಿರುವುದಿಲ್ಲ ಎಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲುಃ  ಆರೋಪಿತರ ಪರ ವಕೀಲರಾದ ಶ್ರೀ.ಎನ್.ಸಿ.ವೈ. ರವರಿಂದಃ

ಆರೋಪಿತರ ಪರ ವಕೀಲರು ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ.

<u>ಮರು ವಿಚಾರಣೆಃ ಇಲ್ಲಃ</u>

( ತೆರೆದ ನ್ಯಾಯಾಲಯದಲ್ಲಿ  ನನ್ನ ಉಕ್ತ ಲೇಖನದಂತೆ ಬೆರಳಚ್ಚುಗಾರನಿಂದ ಬೆರಳಚ್ಚು ಮಾಡಿಸಲಾಯಿತು)

**ಓ. ಹೇ. ಕೇ. ಸರಿ ಅದೆ.**

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು,
ಯಾದಗಿರಿ.